


**SARAYU** - Kannada Monthly Regn. No. KARKAN/2014/62363
February Vol. : 3 Issue : 9 5118/ದುರ್ಮುಖ ಸಂವತ್ಸರ ಫೆಬ್ರವರಿ 2017 ಪುಟ 8 Rs. 10/-

Postal Regn No. PTR/135/2016-18
Licensed to Post without pre-payment
License No: SK/WPP/PTR/177/2016-18



ಗೋ-ಮಂಗಲಯಾತ್ರೆಯ ರಥಕ್ಕೆ
ಡಾ. ಪ್ರಭಾಕರ ಭಟ್ ಇವರಿಂದ ಪುಷ್ಪಾರ್ಚನೆ



ಗೋ-ಮಂಗಲಯಾತ್ರೆಯ ರಥ ವಿದ್ಯಾಕೇಂದ್ರಕ್ಕೆ ಆಗಮಿಸಿದಾಗ ಭಾಗವಹಿಸಿದ ಗಣ್ಯರು



ಶ್ರೀರಾಮ ಪ್ರೌಢಶಾಲೆ ಮತ್ತು ಪದವಿ ವಿದ್ಯಾರ್ಥಿಗಳಿಂದ ಶ್ರಮದಾನ



ವಿವೇಕಾನಂದ ಜಯಂತಿ ಆಚರಣೆ ಮತ್ತು ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಶ್ರೀರಾಮ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಾಲೇಜು ಅಭಿವೃದ್ಧಿ ಸಮಿತಿ, ಮತ್ತು ಮಾತೃಭಾರತಿಯ ಸದಸ್ಯರು



ಕುಟುಂಬ ಪ್ರಬೋಧನ್‌ನ ಅ.ಭಾ. ಪ್ರಮುಖ ಶ್ರೀ ಸು.ರಾಮಣ್ಣ ಇವರಿಂದ ಶ್ರೀರಾಮಾನುಜಾಚಾರ್ಯ ಜನ್ಮಸಹಸ್ರಮಾನದ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ



ಮಂಗಲ ಗೋಯಾತ್ರೆಯ ಅಂಗವಾಗಿ ನಡೆದ ಅಕ್ಷತಾ ಅಭಿಯಾನ ಶ್ರೀಮತಿ ಕಲ್ಪನಾ ಸಾಗರ, ಶ್ರೀಮತಿ ರಾಜಲಕ್ಷ್ಮಿ ಸಾಗರ, ಪದ್ಮಾವತಿ ಸಾಗರ, ಶ್ರೀಮತಿ ಮಲ್ಲಿಕಾ ಭಟ್, ಶ್ರೀ ಕೃಷ್ಣ ನೀರಮೂಲೆ ಮತ್ತಿತರರು.



ಶ್ರೀರಾಮ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಗಣರಾಜ್ಯೋತ್ಸವ ನಿಮಿತ್ತ ಸ್ವಚ್ಛ ಪರಸರ ಕಾರ್ಯಕ್ರಮ.



ಪದವಿ ಪೂರ್ವ ವಿದ್ಯಾಲಯದಲ್ಲಿ ವಿವೇಕಾನಂದ ಜಯಂತಿ ಆಚರಣೆ



ಶ್ರೀರಾಮ ಶಿಶುಮಂದಿರ ವಿವೇಕಾನಂದ ಜಯಂತಿ ಆಚರಣೆ



ಶ್ರೀರಾಮ ಶಿಶುಮಂದಿರದಲ್ಲಿ ಸೇವಾ ದಿನಾಚರಣೆ



ಶ್ರೀ ಅಜಿತ್ ಕುಮಾರ್ ಇವರ ಪುಣ್ಯ ಸ್ಮರಣೆಯನ್ನು ಸೇವಾ ದಿನವಾಗಿ ಆಚರಿಸಿದ ಶಿಶುಮಂದಿರ ಮಾತೆಯರು



ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಹೊರ ಸಂಚಾರದಲ್ಲಿ ಮಣ್ಣಿನ ಮಡಿಕೆ ತಯಾರಿ ಘಟಕಕ್ಕೆ ಭೇಟಿ



ಗೋವು–ಮೇವು–ನಾವು ಯೋಜನೆಯಲ್ಲಿ ಹುಲ್ಲಿನ ಗಿಡ ನೆಡುತ್ತಿರುವ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು



7.1.2017ರಂದು ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ ಕರ್ನಾಟಕ ತೋಟಗಾರಿಕಾ ಫೆಡರೇಶನ್‌ನ ನಿರ್ದೇಶಕ ರಮೇಶ್ ವೈದ್ಯ, ಪತ್ನಿ ಪರಿಮಳ, ಕ್ಯಾಂಪ್ಕೋ ಅಧ್ಯಕ್ಷ ಶ್ರೀ ಸತೀಶ್ಚಂದ್ರ



ಪ್ರಾಥಮಿಕ ಶಾಲೆಯಲ್ಲಿ ಜನವರಿ ತಿಂಗಳಲ್ಲಿ ಸಾಮೂಹಿಕ ಹುಟ್ಟುಹಬ್ಬ ಆಚರಿಸಿದ ವಿದ್ಯಾರ್ಥಿಗಳ ಪೋಷಕರು



ಪ್ರಾಥಮಿಕ ವಿಭಾಗದ ಮಕರ ಸಂಕ್ರಮಣ ಆಚರಣೆಯಲ್ಲಿ ವಿದ್ಯಾರ್ಥಿಗಳಿಗೆ ಎಳ್ಳು-ಬೆಲ್ಲ ಹಂಚಿದ ಮಾತಾಜಿಯವರು.



ಉಡುಪಿಯಲ್ಲಿ ನಡೆದ ಸಂಸ್ಕೃತ ಸಮ್ಮೇಳನದ ವಸ್ತು ಪ್ರದರ್ಶಿನಿ ವೀಕ್ಷಿಸಿದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು



ಪೂರ್ವಗುರುಕುಲ ವಿದ್ಯಾರ್ಥಿಗಳಿಗೆ ವನ ಪಾಠ



ವಿವೇಕಾನಂದ ಜಯಂತಿ ಪ್ರಯುಕ್ತ ಸ್ಪರ್ಧೆ



ವಿವೇಕಾನಂದ ಜಯಂತಿ ಆಚರಣೆಯಲ್ಲಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ಸುಮಂತ್‌ರವರು ವಿವೇಕಾನಂದರ ಬಗ್ಗೆ ಮಾತನಾಡಿದರು.



ಕಲಾಶ್ರೀ ಪ್ರಶಸ್ತಿ ವಿಜೇತರಾದ 7ನೇ ತರಗತಿಯ ಕು. ಅರ್ಪಿತಾ





ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ನಡೆಸುವ ಐ.ಎ.ಎಸ್., ಐ.ಪಿ.ಎಸ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ 'ಯಶಸ್–2017'ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಾದ ನಿವೇದಿತಾ 10 ಭರತ, ಸನತ್ 10 ಭರತ, ಲೋಹಿತ್ 10 ದುರ್ಗಾವತಿ



ರಾಮಾಯಣ ಪರೀಕ್ಷೆಯಲ್ಲಿ ಕು. ದಿವ್ಯಶ್ರೀ. ಎಸ್ ಜಿಲ್ಲಾಮಟ್ಟದಲ್ಲಿ ದ್ವಿತೀಯ ಸ್ಥಾನ,



ಮಹಾಭಾರತ ಪರೀಕ್ಷೆಯಲ್ಲಿ ಮಿಲಿಂದ್.ಎಸ್.ಜೋಷಿ ರಾಜ್ಯಮಟ್ಟದಲ್ಲಿ ತೃತೀಯ ಸ್ಥಾನ

## ಸುಭಾಷಿತ ಮಂಜರಿ

**ಪರೋಪಕಾರಶೀಲತ್ವಂ ಪರದುಃಖಾಸಹಿಷ್ಣುತಾ।**
**ದಯಾಪರತ್ವಂ ದಾಕ್ಷಿಣ್ಯಂ ಸತಾಂ ಸ್ವಾಭಾವಿಕಾ ಗುಣಾಃ॥**

**"ಇತರರಿಗೆ ಸಹಾಯಮಾಡುವ ಪ್ರವೃತ್ತಿ, ಯಾರಾದರೂ ಕಷ್ಟದಲ್ಲಿದ್ದಾರೆಂದು ತಿಳಿದರೆ ನೋವಿಗೊಳಗಾಗುವುದು, ಬೇರೆಯವರಲ್ಲಿ ದಯೆ ತೋರುವುದು, ಇತರರಿಗೆ ಅನುಕೂಲಕರವಾಗುವಂತೆ ಯೋಚಿಸುವುದು– ಇವು ಸಂಸ್ಕಾರವಂತರ ಸಹಜ ಸ್ವಭಾವ".**

**ಆತ್ಮೀಯ ಓದುಗರೇ,**

ಜನವರಿ ತಿಂಗಳ ವರದಿಯೊಂದಿಗೆ ನಿಮ್ಮ ಕೈಯಲ್ಲಿರುವ ಈ ಸಂಚಿಕೆಯು 6ನೇ ವರ್ಷ ಕಳೆದು 7ನೇ ವರ್ಷಕ್ಕೆ ಕಾಲಿಟ್ಟ ಹೊಸ ಸಂಚಿಕೆ. ತಾಂತ್ರಿಕ, ವ್ಯಾವಹಾರಿಕ ವ್ಯವಸ್ಥೆಗಾಗಿ ಇದು 3ನೇ ಸಂಪುಟ 9ನೇ ಸಂಚಿಕೆ ಎಂದು ಪುಟದಲ್ಲಿ ನಮೂದಿಸಿದೆಯಾದರೂ ವಾಸ್ತವವಾಗಿ ಸರಯೂಗೆ ಇದು 7ನೇ ವರ್ಷ. ಕಳೆದ 6 ವರ್ಷಗಳಿಂದ ನಮ್ಮೆಲ್ಲ ವಿದ್ಯಾಭಿಮಾನಿಗಳನ್ನು ಹಾಗೂ ಸಂಸ್ಥೆಯನ್ನು ಬೆಸೆಯುವ ಮಾಧ್ಯಮವಾಗಿ ಸರಯೂ ವ್ಯವಹಸರಿಸುತ್ತಿದೆ. ಎಂದಿನಂತೆ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಇನ್ನಿತರ ಕಾರ್ಯಕ್ರಮಗಳು ನಿರಂತರ ನಡೆಯುತ್ತಿವೆ. ನಿಮ್ಮ ಸಲಹೆ ಸಹಕಾರಗಳನ್ನು ಸಾದರದಿಂದ ಸ್ವೀಕರಿಸುತ್ತೇವೆ.

**ವಂದನೆಗಳು**

**ಸಂಪಾದಕ ಬಳಗ**


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ದಿವ್ಯಾಕುಮಾರಿ (ಶಿಶುಮಂದಿರ)
ಕಾವ್ಯ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ಶ್ರೀಲತಾ (ಪದವಿಪೂರ್ವ)
ಜ್ಯೋತಿ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


ಚಿಂತನರಶ್ಮಿ

# ದೃಷ್ಟಿ–ಸೃಷ್ಟಿ

ಒಂದು ದಿನ ಒಬ್ಬರು ಪಂಡಿತರು ಸಂಜೆ ತಿರುಗಾಡಿ, ವಾಯು ಸೇವನೆ ಮಾಡಿ ಬರುವುದಕ್ಕೆಂದು ನದೀ ತೀರಕ್ಕೆ ನಡೆದರು. ಬಿಸಿಲು ಕಡಿಮೆಯಾಗುತ್ತಿದೆ, ನಿಧಾನವಾಗಿ ನೀರಿನ ಮೇಲಿನ ತಂಪಾದ ಗಾಳಿ ಬೀಸುತ್ತಿದೆ. ಮುಂದೆ ಸಾಗುತ್ತಿದ್ದಾಗ ಒಂದು ದೃಶ್ಯ ಅವರ ಕಣ್ಣಿಗೆ ಬಿತ್ತು.

ಒಬ್ಬ ತರುಣ, ಓರ್ವ ತರುಣಿಯನ್ನು ತನ್ನ ಬೆನ್ನ ಮೇಲೆ ಹೊತ್ತುಕೊಂಡು ಬರುತ್ತಿದ್ದಾನೆ. ಪಂಡಿತನಿಗೆ ಅಸಹ್ಯವಾಯಿತು. ಇದೇನು, ಜನರು ತಿರುಗಾಡುವ ಸ್ಥಳದಲ್ಲಿ ಹೀಗೆ ಶೃಂಗಾರ ಪ್ರದರ್ಶನವೇ? ಜನ ಏನೆಂದುಕೊಂಡಾರು ಎಂದು ಅವರು ಚಿಂತಿಸುವಷ್ಟರಲ್ಲಿ ಆ ತರುಣ ಬೆನ್ನ ಮೇಲಿದ್ದ ತರುಣಿಯನ್ನು ಕೆಳಗಿಳಿಸಿ, ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಒಂದು ಶೀಶೆಯಿಂದ ಏನನ್ನೋ ಕುಡಿಯಲಾರಂಭಿಸಿದ. ಅಯ್ಯೋ, ಅಯ್ಯೋ ಅದು ಸುರೆಯ ಶೀಶೆ. ಪಂಡಿತರ ಕೋಪ ಏರತೊಡಗಿತು. ನಿಜವಾಗಿಯೂ ದೇಶಕ್ಕೆ ಕಲಿಕಾಲ ಬಂದಿದೆ ಎಂದು ಸಂಕಟಪಡತೊಡಗಿದರು. ಮತ್ತೆ ಅವರತ್ತ ಓಡಿದರು. ಆಗ ಆ ಹುಡುಗ ಶೀಶೆಯನ್ನು ಭದ್ರವಾಗಿ ಮುಚ್ಚಿ ಸೊಂಟಕ್ಕೆ ಕಟ್ಟಿಕೊಂಡ. ನಂತರ ಕೆಳಗೆ ಕುಳಿತಿದ್ದ ತರುಣಿಯ ಸೀರೆಯನ್ನು ಮೊಳಕಾಲಿನ ಮೇಲಿನವರೆಗೂ ಎತ್ತಿ ಕಟ್ಟಿದ. ನಿಧಾನವಾಗಿ ಅವಳ ಎರಡೂ ಕಾಲುಗಳನ್ನು ಒತ್ತಿ, ಒತ್ತಿ ನೀವತೊಡಗಿದ. ಈಗಲಂತೂ ಪಂಡಿತರು ಸಿಟ್ಟಿನಿಂದ ಕೆಂಡವೇ ಆಗಿ ಹೋಗಿದ್ದರು. ಇಂಥ ಅಶ್ಲೀಲ ಪ್ರದರ್ಶನ, ನಮ್ಮ ಸಮಾಜದ ಮೌಲ್ಯಗಳನ್ನು ಹಾಳು ಮಾಡಿ ಬಿಡುತ್ತದಲ್ಲ ಎಂಬ ಚಿಂತೆ ಪಂಡಿತರಿಗೆ. ಅವರು ತಮ್ಮ ವಾಯು ಸೇವನೆಯನ್ನು ಬಿಟ್ಟು ಊರ ಕಡೆಗೆ ಓಡಿದರು. ಹಿರಿಯರಾದ ಪಟೇಲರು, ಶಾನುಭೋಗರನ್ನು ಕರೆದು ತಮ್ಮ ಊರ ಹತ್ತಿರ ಇಂಥ ಅನ್ಯಾಯವಾಗುತ್ತಿದೆಯೆಂತಲೂ, ಅದಕ್ಕೆ ತಕ್ಕ ಶಾಸ್ತಿ ಮಾಡದಿದ್ದರೆ ತಾವೆಲ್ಲರೂ ಈ ಅನ್ಯಾಯದಲ್ಲಿ ಭಾಗವಹಿಸಿದಂತಾಗುತ್ತದೆ ಎಂತಲೂ ಒತ್ತಿ ಹೇಳಿದರು. ಅವರಿಗೆಲ್ಲ ಪಂಡಿತರ ಜ್ಞಾನದಲ್ಲಿ, ತುಂಬ ನಂಬಿಕೆ. ಎಲ್ಲರೂ ಸೇರಿ ಮತ್ತೆ ನದಿಯ ಕಡೆಗೆ ಓಡಿದರು.

ಆ ತರುಣ, ತರುಣಿಯರು ಬಹುದೂರವೇನೂ ಹೋಗಿರಲಿಲ್ಲ. ಆದರೆ ಒಂದು ವಿಶೇಷ ಘಟನೆ ನಡೆಯುತ್ತಿತ್ತು. ಮೂವರು ಪುಟ್ಟ ಹುಡುಗರು ಒಂದು ತೆಪ್ಪದ ಮೇಲೇರಿ ಮೀನು ಹಿಡಿಯಲು ನದಿಯಲ್ಲಿ ಸಾಗಿದ್ದಾರೆ. ಅಲ್ಲಿ ಒಂದು ಜೋರು ಪ್ರವಾಹ ಹೆಚ್ಚು ಆ ತೆಪ್ಪ ಒಂದು ಕಲ್ಲಿನ ಮೂಲೆಗೆ ಬಡಿದು ಬೋರಲಾಗಿ ಬಿತ್ತು. ಹುಡುಗರೆಲ್ಲ ನೀರು ಪಾಲಾದರು. ಅದನ್ನು ನೋಡುತ್ತಿದ್ದ ತರುಣ, ತರುಣಿಯನ್ನು ಕೆಳಗಿಳಸಿ, ನೀರಿಗೆ ಹಾರಿ ಅವರೆಲ್ಲರನ್ನು ದಂಡೆಗೆ ತಂದು ಬಿಟ್ಟ. ಅವನಿಗೆ ತುಂಬ ಸುಸ್ತಾಗಿದ್ದಂತೆ ಕಂಡಿತು. ಅವನು ಮತ್ತೆ ಆ ಹುಡುಗಿಯ ಬಳಿಗೆ ಹೋಗಿ ಅವಳ ಕಾಲು ನೀವಲಾರಂಭಿಸಿದ. ನಡು ನಡುವೆ ತನ್ನ ಶೀಶೆಯಿಂದ ದ್ರವವನ್ನು ಕುಡಿಯುತ್ತಿದ್ದ. ಊರ ಹಿರಿಯರಿಗೆಲ್ಲ ಇರಿಸುಮುರಿಸಾಯಿತು. ಆತ ಮಕ್ಕಳನ್ನು ಉಳಿಸಿದ್ದೇನೋ ಒಳ್ಳೆಯ ಕೆಲಸವೇ ಆದರೆ ಈ ತರಹದ ನಡತೆ?

ಅವರು ಅವನ ಹತ್ತಿರ ಹೋಗಿ ತರಾಟೆಗೆ ತೆಗೆದುಕೊಂಡರು. ಒಂದಿಬ್ಬರು ಅವನನ್ನು ಹಿಡಿದು ಹೊಡೆದೇ ಬಿಟ್ಟರು, "ನಾವೆಲ್ಲ ಮಾನವಿರುವವರು. ಇಲ್ಲಿ ಇಂಥ ಹೊಲಸು ಕೆಲಸ ಮಾಡುತ್ತೀಯಾ?" ಎಂದು ಹೇಳುತ್ತಲೇ ಗುದ್ದಿದರು. ಆತ ಅಳುತ್ತ ಹೇಳಿದ, "ಸ್ವಾಮಿ, ನಾನು ಯಾವ ಅನ್ಯಾಯವನ್ನೂ ಮಾಡಿಲ್ಲ. ಈಕೆ ನನ್ನ ತಂಗಿ. ನಿನ್ನೆಯಿಂದ ಆಕೆಗೆ ಕಾಲುಗಳು ಬಿದ್ದು ಹೋಗಿವೆ. ನಮ್ಮನ್ನು ಊರಲ್ಲಿ ಯಾರೂ ಮುಟ್ಟಿಸಿಕೊಳ್ಳುವುದಿಲ್ಲ, ಯಾರೂ ಎತ್ತಿನ ಗಾಡಿಯನ್ನು ಕೊಡಲಿಲ್ಲ. ಆದ್ದರಿಂದ ಹೊತ್ತುಕೊಂಡೇ ಆಕೆಯನ್ನು ವೈದ್ಯರ ಬಳಿಗೆ ಕರೆದೊಯ್ಯುತ್ತಿದ್ದೇನೆ. ಕಾಲು ನೀವಿದರೆ ಸ್ವಲ್ಪ ಹಾಯೆನಿಸುತದೆ ಆಕೆಗೆ. ನಾನು ಕುಡಿಯುತ್ತಿರುವುದು ಗಂಗೆಯ ನೀರು, ಊರಿಂದ ತಂದಿದ್ದೇನೆ. ಬೇರೆ ಕಡೆಗೆ ನೀರನ್ನು ಮುಟ್ಟಲು ಬಿಡುತ್ತಾರೋ ಇಲ್ಲವೋ ತಿಳಿಯದು. ದಯವಿಟ್ಟು ಕ್ಷಮಿಸಿ".

ಹಿರಿಯರ ಮುಖಗಳೆಲ್ಲ ಬಿದ್ದು ಹೋದವು. ಅಶ್ಲೀಲತೆ ಘಟನೆಯಲ್ಲಿರಲಿಲ್ಲ, ನೋಡುವವರ ಮನಸ್ಸಿನಲ್ಲಿತ್ತು. ದೃಷ್ಟಿ ಸ್ವಚ್ಛವಾಗಿದ್ದರೆ ಸೃಷ್ಟಿ ಸುಂದರವಾಗಿರುತ್ತದೆ.

# ಶಿಶುಮಂದಿರ

**ಸೇವಾದಿನ**

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶಿಶುಮಂದಿರಗಳಲ್ಲಿ ಅಜಿತ್ ಕುಮಾರರ ಪುಣ್ಯತಿಥಿ-ಯ ನಿಮಿತ್ತ ವಿವಿಧೆಡೆ ಸೇವಾದಿನವನ್ನು ಆಚರಣೆ ಮಾಡಲಾಯಿತು.

**ಶ್ರೀ ರಾಮ ಶಿಶುಮಂದಿರ ಕಲ್ಲಡ್ಕ** : ಸೇವಾದಿನದ ಅಂಗವಾಗಿ ದಿನಾಂಕ 3-1-2017 ರಂದು ಶಿಶುಮಂದಿರದ ಪಾಲಕರಿಂದ ಶ್ರಮದಾನ ನಡೆಸಲಾಯಿತು.. ಶ್ರೀಮತಿ ಡಾ॥ ಕಮಲಾ ಭಟ್ ಅಜಿತ್ ಕುಮಾರರ ಬಗ್ಗೆ ತಿಳಿಸಿದರು. ಒಟ್ಟು 25 ಪಾಲಕರು ಭಾಗವಹಿಸಿದ್ದರು.

**ನೆಟ್ಲ ಮತ್ತು ಅಮ್ಟೂರು ಬಾಲಗೋಕುಲ**ದ ಮಕ್ಕಳಿಗೆ ಶ್ರೀಕೃಷ್ಣ ಭಜನಾ ಮಂದಿರದಲ್ಲಿ ದಿನಾಂಕ 1-1-2017ರಂದು ಸೇವಾ ದಿನದ ಅಂಗವಾಗಿ ರಸಪ್ರಶ್ನೆ ಕಾರ್ಯಕ್ರಮ ಮಾಡಲಾಯಿತು. ಶ್ರೀಮತಿ ಪನಿಪಾ ಅಜಿತ್ ಕುಮಾರರ ಬಗ್ಗೆ ತಿಳಿಸಿದರು. ಒಟ್ಟು 29 ಮಕ್ಕಳು ಭಾಗವಹಿಸಿದ್ದರು.

**ಮಾಣಿ ಬಾಲಗೋಕುಲ**ದಲ್ಲಿ ದಿ: 2-1-2017 ರಂದು ಸೇವಾ ದಿನದ ಪ್ರಯುಕ್ತ ರಸಪ್ರಶ್ನೆ ಕಾರ್ಯಕ್ರಮ ಮಾಡಲಾಯಿತು. ಶ್ರೀಮತಿ ಪನಿಪಾ ಅಜಿತ್ ಕುಮಾರರ ಬಗ್ಗೆ ತಿಳಿಸಿದರು. ಒಟ್ಟು 25 ಮಕ್ಕಳು ಭಾಗವಹಿಸಿದ್ದರು.

**ಶ್ರೀ ಗಣೇಶ ಶಿಶುಮಂದಿರ ಬೊಂಡಾಲ:** ದಿನಾಂಕ 3-1-2017ರಂದು ಸೇವಾ ದಿನದ ಪ್ರಯುಕ್ತ ಬಾಲಗೋಕುಲದ ಮಕ್ಕಳಿಗೆ ಭಜನಾ ಕಾರ್ಯಕ್ರಮ ಮಾಡಲಾಯಿತು. ಶ್ರೀಮತಿ ಸಂಗೀತಾ ಅಜಿತ್ ಕುಮಾರರ ಬಗ್ಗೆ ತಿಳಿಸಿದರು. ಒಟ್ಟು 45 ಮಕ್ಕಳು ಭಾಗವಹಿಸಿದ್ದರು.

**ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು:** 6-1-2017ರಂದು ಸೇವಾ ದಿನದ ಪ್ರಯುಕ್ತ ಮಕ್ಕಳು ಶಿಶುಮಂದಿರದ ಸುತ್ತಮುತ್ತ ಸ್ವಚ್ಛತೆಯನ್ನು ಮಾಡಿದರು. ಶ್ರೀಮತಿ ಮೇಣಿಮಾಲ ಸೇವಾ ದಿನದ ಉದ್ದೇಶ ತಿಳಿಸಿದರು. ಒಟ್ಟು 25 ಮಕ್ಕಳು ಭಾಗವಹಿಸಿದ್ದರು.

**ಶ್ರೀ ಸರಸ್ವತಿ ಶಿಶುಮಂದಿರ ಶೇಡಿಗುರಿ**: 16-1-2017 ರಂದು ಸೇವಾ ದಿನದ ಅಂಗವಾಗಿ ಕೋದಂಡರಾಮ ದೇವಸ್ಥಾನದಲ್ಲಿ ಪಾಲಕರು ಶ್ರಮದಾನ ಮಾಡಿದರು. ಶ್ರೀಮತಿ ಮಲ್ಲಿಕಾ ಶೆಟ್ಟಿ ಸೇವಾ ದಿನದ ಉದ್ದೇಶ ತಿಳಿಸಿದರು. ಒಟ್ಟು 15 ಪಾಲಕರು ಭಾಗವಹಿಸಿದ್ದರು.

ದಿನಾಂಕ 17-1-2017 **ಶೇಡಿಗುರಿ ಶಿಶುಮಂದಿರ**ದ ಕಾರ್ಯಕ್ರಮದಲ್ಲಿ ಶ್ರೀಮತಿ ಶುಭಲಕ್ಷ್ಮೀ ಶಿವಗಿರಿ ಅಜಿತ್ ಕುಮಾರರ ಬಗ್ಗೆ ತಿಳಿಸಿದರು. 25 ಮಕ್ಕಳು ಭಾಗವಹಿಸಿದ್ದರು.

**ಮಕರ ಸಂಕ್ರಾತಿ 14-1-2017**

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿರುವ ಇತರ ಶಿಶುಮಂದಿರಗಳಲ್ಲಿ ಮಕರ ಸಂಕ್ರಾಂತಿ ಉತ್ಸವವನ್ನು ಆಚರಣೆ ಮಾಡಲಾಯಿತು.

**ಶ್ರೀ ರಾಮ ಶಿಶುಮಂದಿರ ಕಲ್ಲಡ್ಕ:** ಮಕರ ಸಂಕ್ರಾಂತಿ ದಿನದಂದು ಪರಿಸರದ 450 ಮನೆಗಳಿಗೆ ತೆರಳಿ ಎಳ್ಳು ಬೆಲ್ಲ ಅರಶಿನ ಕುಂಕುಮ ಹೂವು ನೀಡುವುದರ ಮೂಲಕ ಆಚರಿಸಲಾಯಿತು.

ದಿನಾಂಕ 15-1-2017 ರಂದು ಶ್ರೀರಾಮ ಶಿಶುಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಯ ಪವಿತ್ರ ಮಾತಾಜಿ ಸಂಕ್ರಾಂತಿಯ ವಿಶೇಷತೆಯನ್ನು ತಿಳಿಸಿದರು.

ಶ್ರೀ ಗಣೇಶ ಶಿಶುಮಂದಿರ ಬೊಂಡಾಲದ ಪರಿಸರದಲ್ಲಿ 105 ಮನೆಗಳಿಗೆ, ಶ್ರೀ ಕೃಷ್ಣ ಶಿಶುಮಂದಿರ ಸಜೀಪದ ಪರಿಸರದಲ್ಲಿ 110 ಮನೆಗಳಿಗೆ, ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಪರಿಸರದಲ್ಲಿ 84 ಮನೆಗಳಿಗೆ, ಹಾಗೂ ಶ್ರೀ ಸರಸ್ವತಿ ಶಿಶುಮಂದಿರ ಶೇಡಿಗುರಿ ಪರಿಸರದಲ್ಲಿ 125 ಮನೆಗಳಿಗೆ ತೆರಳಿ ಸಂಕ್ರಾಂತಿಯ ಶುಭಾಶಯವನ್ನು ತಿಳಿಸಿದರು.

**ಪಾಲಕರ ಸಭೆ 20-1-2017**

ಶ್ರೀ ಸರಸ್ವತಿ ಶಿಶುಮಂದಿರ ಶೇಡಿಗುರಿಯಲ್ಲಿ ವರ್ಷದ 2ನೇ ಪಾಲಕರ ಸಭೆ ನಡೆಯಿತು. ಮಾರ್ಗದರ್ಶಕರಾಗಿ ಶ್ರೀ ರಾಮ ಶಿಶುಮಂದಿರದ ಮುಖ್ಯಸ್ಥರು ಭ। ಗಂಗಾ ಮಾತಾಜಿ ಆಗಮಿಸಿದ್ದರು. ಮಗುವನ್ನು ಅರ್ಥಮಾಡಿಕೊಳ್ಳುವುದು, ಅವರಲ್ಲಿರುವ ಸ್ವಭಾವ, ಮಗುವಿಗೋಸ್ಕರ ಪಾಲಕರು ಮಾಡಿಕೊಳ್ಳಬೇಕಾದ ಬದಲಾವಣೆ ಹಾಗೂ ಮಕ್ಕಳಿಗೆ ಕೊಡಬೇಕಾದಂತಹ ಆಹಾರದ ಬಗ್ಗೆ ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದಲ್ಲಿ 2ಜೋಡಿ ದಂಪತಿಗಳು ಸೇರಿ 20 ಪಾಲಕರು ಭಾಗವಹಿಸಿದ್ದರು. ಶ್ರೀಮತಿ ವೇದಾವತಿ ಸ್ವಾಗತಿಸಿ, ಶ್ರೀಮತಿ ಯಶ್ವಿತಾ ನಿರೂಪಿಸಿ, ಶ್ರೀಮತಿ ಹೇಮಾವತಿ ವಂದಿಸಿದರು.

**ಪಾಲಕರ ಸಭೆ**

ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ದಿನಾಂಕ 26-1-2017 ರಂದು ವರ್ಷದ 2ನೇ ಪಾಲಕರ ಸಭೆ ನಡೆಯಿತು. ಪ್ರಾರಂಭದಲ್ಲಿ ಭ। ಗಂಗಾ ಮಾತಾಜಿ ಶಿಶುಮಂದಿರದಲ್ಲಿ ನೀಡುವ ಸಲಕರಣೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಶ್ರೀ ರಾಮ ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ ಇವರು ಮಾರ್ಗದರ್ಶನ ಮಾಡಿದರು. ಒಟ್ಟು 33 ಪಾಲಕರು ಭಾಗವಹಿಸಿದ್ದರು. ಶ್ರೀಯುತ ಆನಂದ ಸ್ವಾಗತಿಸಿ ಶ್ರೀಮತಿ ಕವಿತಾ ನಿರೂಪಿಸಿ ಶ್ರೀಮತಿ ಅಕ್ಷತಾ ವಂದಿಸಿದರು.

**ಶ್ರೀ ಸರಸ್ವತಿ ಶಿಶುಮಂದಿರ ಶೇಡಿಗುರಿ**

ದಿನಾಂಕ 5-1-2017 ರಂದು ಅಂತರ ಶ್ರೀ ಕೋದಂಡರಾಮ ಭಜನಾ ಮಂದಿರದ ವಾರ್ಷಿಕೋತ್ಸವದ ಅಂಗವಾಗಿ ನಡೆದ ಏಕಹಾ ಭಜನಾ ಕಾರ್ಯಕ್ರಮಲ್ಲಿ ಶೇಡಿಗುರಿ ಶಿಶುಮಂದಿರದ 26 ಮಕ್ಕಳು ಮತ್ತು 6 ಮಂದಿ ಪಾಲಕರು 1 ಗಂ-ಟೆಯ ಭಜನಾ ಕಾರ್ಯಕ್ರಮವನ್ನು ನೀಡಿದರು.

**ವಿವೇಕ ಜಯಂತಿ**

ದಿನಾಂಕ 12-1-2017 ರಂದು ಶ್ರೀ ರಾಮ ಶಿಶುಮಂದಿರದಲ್ಲಿ ವಿವೇಕ ಜಯಂತಿ ಕಾರ್ಯಕ್ರಮ ಮಾಡಲಾಯಿತು. ಭ। ಗಂಗಾ ಮಾತಾಜಿ ವಿವೇಕಾನಂದರ ಬಾಲ್ಯ ಜೀವನದ ಘಟನೆಗಳನ್ನು ತಿಳಿಸಿದರು. ಒಟ್ಟು 154 ಮಕ್ಕಳು ಭಾಗವಹಿಸಿದ್ದರು.

# ಪ್ರಾಥಮಿಕ ಶಾಲೆ

**ಅಧ್ಯಯನ ಪ್ರವಾಸ**

ದಿನಾಂಕ 31.01.2017 ರಂದು 4ನೇ ತರಗತಿ ವಿದ್ಯಾರ್ಥಿಗಳಿಗೆ ಪಿಳಿಕುಳ ನಿಸರ್ಗಧಾಮ, ಗುಡಿ-ಕೈಗಾರಿಕಾ ಕೇಂದ್ರ, ಕದ್ರಿ ದೇವಸ್ಥಾನ, ಕಲ್ಲಡ್ಕ ಹಂಚಿನ ಕಾರ್ಖಾನೆಗೆ ಅಧ್ಯಯನ ಪ್ರವಾಸವನ್ನು ಹಮ್ಮಿಕೊಳ್ಳಲಾಗಿತು. ಒಟ್ಟು 110 ವಿದ್ಯಾರ್ಥಿಗಳು, 5 ಶಿಕ್ಷಕರು ಅಧ್ಯಯನ ಪ್ರವಾಸ ಪಾಲ್ಗೊಂಡಿದ್ದರು.

**ಗೋವು ಮೇವು ನಾವು:** 28.01.2017

ಕೃಷಿ ಸಂಘದ ವತಿಯಿಂದ ಗೋವು ಮೇವು ನಾವು ಎಂಬ ಕಾರ್ಯಕ್ರಮ ನಡೆಯಿತು. ಕೃಷಿ ಸಂಘದ ಸದಸ್ಯರು ವಸುಧಾರ ಗೋಶಾಲೆಯ ಸಮೀಪ ಮೇವನ್ನು ನೆಟ್ಟರು ಹಾಗೂ ತಮ್ಮ ಮನೆಗಳಿಂದ ತಂದ ಮೇವನ್ನು ಗೋವುಗಳಿಗೆ ತಿನ್ನಿಸಿ ಖುಷಿಪಟ್ಟರು.

**ಗೋಯಾತ್ರೆ ಮಹಾಮಂಗಲ ಕಾರ್ಯಕ್ರಮದ ಆಮಂತ್ರಣ :**

ದಿನಾಂಕ 10.01.2016ರಂದು ಮಂಗಲಗೋಯಾತ್ರೆ ಮಾತೃಭಾರತಿ ಸದಸ್ಯರಾದ ಶ್ರೀಮತಿ ಕಲ್ಪನಾ ಹಾಗೂ ಶ್ರೀಮತಿ ಮಲ್ಲಿಕಾ ಆಗಮಿಸಿ ಸರಸ್ವತಿ ವಂದನೆಯಲ್ಲಿ ಪಾಲ್ಗೊಂಡರು. ಶ್ರೀಮತಿ ಕಲ್ಪನಾ ಇವರು ಜನವರಿ 27,28,29ರಂದು ಮಂಗಳೂರಿನಲ್ಲಿ ನಡೆಯಲಿರುವ ಸಪ್ತರಾಜ್ಯದ ಮಂಗಲಗೋಯಾತ್ರೆಯ ಮಹಾಮಂಗಲ ಸಮಾರೋಪ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿ ಮುಖ್ಯೋಪಾಧ್ಯಾಯರು ಹಾಗೂ ಮಾತಾಜಿ ಶ್ರೀಮಾನ್‌ರವರಿಗೆ ಅಕ್ಷತೆ ಹಾಗೂ ಆಮಂತ್ರಣ ಪತ್ರಿಕೆ ನೀಡಿ ಕಾರ್ಯಕ್ರಮಕ್ಕೆ ಆಮಂತ್ರಿಸಿದರು

**ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ**

ದಿನಾಂಕ 26.01.2017 ರಂದು ಜನವರಿ ತಿಂಗಳಿನಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬ ಹಾಗೂ ಭಜನಾ ಕಾರ್ಯಕ್ರಮ ನಡೆಯಿತು. ಅತಿಥಿಗಳಾದ ಮಂಗಳೂರಿನ ಕೆನರಾ ವರ್ಕ್‌ಶಾಪ್‌ನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿರುವ ಪ್ರೌಢಶಾಲೆ ಹಳೆ ವಿದ್ಯಾರ್ಥಿ ನಮ್ಮ ಪೋಷಕರಾದ ಶ್ರೀ ವಿಶ್ವನಾಥ್ ಇವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಪ್ರಾ.ಶಾಲಾಭಿವೃದ್ಧಿ ಸಮಿತಿ ಸದಸ್ಯ ಪಿ.ಕೆ.ಪದ್ಮನಾಭ, ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು, ಹಾಗೂ ಹುಟ್ಟು ಹಬ್ಬ ಆಚರಿಸಿಕೊಂಡ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

**ಮಕರ ಸಂಕ್ರಾಂತಿ ಉತವ**

ದಿನಾಂಕ 16.01.2017 ರಂದು ವೇದವ್ಯಾಸ ಸಭಾಭವನದಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಯಿತು. ರೇಣುಕಾ ಮಾತಾಜಿ ಮಕರ ಸಂಕ್ರಾಂತಿಯ ಮಹತ್ವವನ್ನು ತಿಳಿಸಿದರು. ಮಾತಾಜಿಯವರು ಸ್ವತಃ ತಯಾರಿಸಿದ ಸಂಕ್ರಾಂತಿ ವಿಶೇಷವಾದ ಎಳ್ಳು ಬೆಲ್ಲವನ್ನು ವಿದ್ಯಾರ್ಥಿಗಳಿಗೆ ವಿತರಿಸಿದರು.

**ಸಂಸ್ಕೃತ ಅಧ್ಯಯನ ಪ್ರವಾಸ**

ದಿನಾಂಕ 08.01.2017ರಂದು ಉಡುಪಿಯಲ್ಲಿ ನಡೆದ ರಾಷ್ಟ್ರಮಟ್ಟದ ಸಂಸ್ಕೃತ ಸಮ್ಮೇಳನಕ್ಕೆ ವಿದ್ಯಾರ್ಥಿಗಳಿಗೆ ಸಂಸ್ಕೃತ ಅಧ್ಯಯನ ಪ್ರವಾಸವನ್ನು ಹಮ್ಮಿಕೊಳ್ಳಲಾಗಿತು. ಒಟ್ಟು 38 ವಿದ್ಯಾರ್ಥಿಗಳು ಹಾಗೂ 6 ಶಿಕ್ಷಕರು ಪಾಲ್ಗೊಂಡಿದ್ದರು.

**ವಿವೇಕ ಜಯಂತಿ**

ದಿನಾಂಕ 12.01.2017ರಂದು ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ಇಲ್ಲಿ ಸ್ವಾಮಿ ವಿವೇಕಾನಂದರ 154ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಸುಮಂತ್ ಶ್ರೀಮಾನ್ ವಿವೇಕಾನಂದರ ಜೀವನದ ಘಟನೆಗಳನ್ನು ತಿಳಿಸಿದರು. 4ನೇ ತರಗತಿ ವಿದ್ಯಾರ್ಥಿಗಳ ಅನನ್ಯ ಮತ್ತು ಶ್ರಮಿಕ ವಿವೇಕಾನಂದರ ಬಗ್ಗೆ ತಮಗೆ ತಿಳಿದ

ವಿಷಯಗಳನ್ನು ಹಂಚಿಕೊಂಡರು. ವಿವೇಕಾನಂದ ಜಯಂತಿ ಪ್ರಯುಕ್ತ ನಡೆದ ಭಾಷಣ, ಪ್ರಬಂಧ, ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸತೀಶ್ ಭಟ್ ಶಿವಗಿರಿ, ಮಾತೃಭಾರತಿ ಅಧ್ಯಕ್ಷೆ ಶ್ರೀಮತಿ ಅರುಣೋದಯ, ಶಾಲಾಭಿವೃದ್ಧಿ ಸಮಿತಿ ಸದಸ್ಯ ಗಿಲ್ಕಿಂಜ ಕೃಷ್ಣ ಭಟ್, ಚಂದ್ರಶೇಖರ ಸಾಲಿಯಾನ್, ರಾಕೋಡಿ ಈಶ್ವರ ಭಟ್ ಹಾಗೂ ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

## ಪ್ರೌಢಶಾಲೆ

**ಘೋಷ್ ಪ್ರದರ್ಶನ**

ಮೂಡಬಿದ್ರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಐದು ರಾಜ್ಯಗಳ ಓಟದ ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರೌಢಶಾಲಾ ವಿಭಾಗದ ಒಟ್ಟು 176 ವಿದ್ಯಾರ್ಥಿಗಳ ತಂಡ ವಿಶೇಷ ಘೋಷ್ ಪ್ರದರ್ಶನ ನೀಡಿರುತ್ತದೆ.

**ರೇಡಿಯೋ ಪಾಂಚಜನ್ಯ ಕಾರ್ಯಕ್ರಮ 03.01.2017**

ವಿವೇಕಾನಂದ ವಿದ್ಯಾವರ್ಧಕ ಸಂಘ ನಡೆಸಿಕೊಂಡು ಬರುತ್ತಿರುವ ರೇಡಿಯೋ ಪಾಂಚಜನ್ಯ ಕಾರ್ಯಕ್ರಮದಲ್ಲಿ ಶ್ರೀರಾಮ ಪ್ರೌಢಶಾಲೆ 14 ವಿದ್ಯಾರ್ಥಿಗಳ ತಂಡ ವೈವಿಧ್ಯಮಯ ಕಾರ್ಯಕ್ರಮ ನಡೆಸಿಕೊಟ್ಟಿರುತ್ತಾರೆ. ಮಾತಾಜಿಯವರಾದ ಶ್ರೀಮತಿ ಗಾಯತ್ರಿ ಹಾಗೂ ಶ್ರೀಮತಿ ಸರ್ವಮಂಗಳ ಮಾರ್ಗದರ್ಶನವನ್ನು ನೀಡಿರುತ್ತಾರೆ.

**ವಿಜ್ಞಾನ ಮಾಹಿತಿ ಕಾರ್ಯಾಗಾರ ಭೇಟಿ 07.11.2017**

ವಿವೇಕಾನಂದ ಪದವಿ ಕಾಲೇಜ್ ಪುತ್ತೂರು ಇಲ್ಲಿ ನಡೆದ ವಿಜ್ಞಾನ ಮಾಹಿತಿ ಕಾರ್ಯಾಗಾರದಲ್ಲಿ ಶ್ರೀರಾಮ ಪ್ರೌಢಶಾಲಾ ವಿಭಾಗದ 35 ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿರುತ್ತಾರೆ.

**ಗಣರಾಜ್ಯೋತ್ಸವ ದಿನಾಚರಣೆ**

ವಿದ್ಯಾಕೇಂದ್ರದಲ್ಲಿ ನಡೆದ 68ನೇ ಗಣರಾಜ್ಯೋತ್ಸವದಲ್ಲಿ ಮಾಜಿ ತಾಲೂಕು ಪಂಚಾಯತ್ ಉಪಾಧ್ಯಕ್ಷರು ಶ್ರೀ ದಿನೇಶ್ ಅಮ್ಟೂರು ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ, ಬಾಳಿಲ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಶ್ರೀ ಸುಂದರ ಸಾಲ್ಯಾನ್, ಪದವಿ ವಿಭಾಗದ ಪ್ರಾಂಶುಪಾಲ ಶ್ರೀ ವಸಂತ ಬಲ್ಲಾಳ, ಪ್ರೌಢಶಾಲಾ ವಿಭಾಗದ ಮುಖ್ಯಶಿಕ್ಷಕ ಶ್ರೀ ರಮೇಶ್ ಎನ್, ಪ್ರಾಥಮಿಕ ವಿಭಾಗ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು. ಧ್ವಜಾರೋಹಣದ ನಂತರ ವಿದ್ಯಾರ್ಥಿಗಳಿಂದ ಶಾರೀರಿಕ ಪ್ರದರ್ಶನ ಮತ್ತು ಸ್ವಚ್ಛತಾ ಕಾರ್ಯ ನಡೆಯಿತು.

**ಸಾಮೂಹಿಕ ಹುಟ್ಟುಹಬ್ಬ ಹಾಗೂ ಭಜನಾ ಕಾರ್ಯಕ್ರಮ**

ಶ್ರೇಷ್ಠ ವ್ಯಕ್ತಿಗಳಾಗಲು ಬೇಕಾದ ಶಿಕ್ಷಣ ಶ್ರೀರಾಮ ವಿದ್ಯಾಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿರುವುದು ಉತ್ತಮ ಕಾರ್ಯ ಎಂದು ಶ್ರೀ ನವೀನ್‌ಕೃಷ್ಣ ಉಪನ್ಯಾಸಕರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್ ಪುತ್ತೂರು ತಿಳಿಸಿದರು.

ನವೆಂಬರ್, ಡಿಸೆಂಬರ್, ಜನವರಿ ತಿಂಗಳಿನಲ್ಲಿ ಜನಿಸಿದ ವಿದ್ಯಾರ್ಥಿಗಳಿಂದ ಭಾರತಮಾತೆಗೆ ಪುಷ್ಪಾರ್ಚನೆಗೈದು, ಹಿರಿಯರಿಂದ ಆಶೀರ್ವಾದ ಪಡೆದು ಸಾಮೂಹಿಕ ಹುಟ್ಟುಹಬ್ಬ ಆಚರಿಸಿಕೊಂಡರು.

## ಪದವಿಪೂರ್ವ

**ಕಾನೂನು ಮತ್ತು ಮಾಹಿತಿ ಕಾರ್ಯಾಗಾರ** 12-01-2017

ಪಾರಂಪರಿಕ ಕೂಟದ ವತಿಯಿಂದ ಮತ್ತು ಪುತ್ತೂರು ವಿವೇಕಾನಂದ ಕಾನೂನು ಮಹಾ ವಿದ್ಯಾಲಯ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಕಾನೂನು ಮತ್ತು ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ದ್ವಿತೀಯ ಪಿಯುಸಿಯ ಎಲ್ಲಾ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದು-ಕೊಂಡರು.

**ವಿವೇಕ ಜಯಂತಿ**

ವಿವೇಕ ಜಯಂತಿಯನ್ನು ಜನವರಿ 12 ರಂದು ಅಜಿತ ಕುಮಾರ ಸಭಾಂಗಣದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಟ್ಲದ ಯುವ ಬ್ರಿಗೇಡ್ ಕಾರ್ಯಕರ್ತ ಶ್ರೀ ತನುಜ್ ಶೆಣೈಯವರು ಆಗಮಿಸಿ, ವಿವೇಕಾನಂದರ ಜೀವನ ಮೌಲ್ಯಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

**ಕಾರ್ಯಾಗಾರ**

ಮಕ್ಕಳ ಮಾನಸಿಕತೆಗೆ ಪೂರಕವಾಗಿ ಶಿಕ್ಷಣವನ್ನೊದಗಿಸುವ ಸಲುವಾಗಿ ಕಾಲೇಜಿನ ಉಪನ್ಯಾಸಕರಿಗೆ ಒಂದು ದಿನದ "ತರಬೇತಿ ಕಾರ್ಯಾಗಾರ" ವು ದಿನಾಂಕ 16 ಸೋಮವಾರ ವಿವೇಕಾನಂದ ಕಾಲೇಜು ಪುತ್ತೂರಿನಲ್ಲಿ ನಡೆಯಿತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಕೆ.ಎಮ್.ಸಿ ಆಸ್ಪತ್ರೆಯ ಮಾನಸಿಕ ತಜ್ಞರಾದ ಡಾ|| ಮಂಜುಳಾ ಮತ್ತು ಡಾ.ವಿದ್ಯಾರವರು ಆಗಮಿಸಿ ತರಬೇತಿ ನೀಡಿದರು. ಕಾಲೇಜಿನ ಸುಮಾರು ಹನ್ನೆರಡು ಉಪನ್ಯಾಸಕರು ಕಾರ್ಯಾಗಾರದ ಪ್ರಯೋಜನ ಪಡೆದರು.

**ವಿಜ್ಞಾನ ಕಾರ್ಯಾಗಾರ:** ದಿನಾಂಕ 20.01.2017

ವಿಜ್ಞಾನ ವಸ್ತು ಮಾದರಿಯ ವಿಷಯದ ಬಗ್ಗೆ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಲ್ಲಿ ವಿದ್ಯಾಭಾರತಿಯ ಪ್ರಾಂತೀಯ ವಿಜ್ಞಾನ ವಿಷಯ ಪ್ರಮುಖರಾದ ಎಸ್.ವಿ ಹೊನ್ನುಂಗರ್ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸೇವಾ ಪ್ರಮುಖ್‌ರಾದ ಗಣಪತಿ ಹೆಗ್ಡೆ ಉಪಸ್ಥಿತರಿದ್ದರು

**ಭಾಷಣ ಸ್ಪರ್ಧೆ**

ದಿನಾಂಕ 10-01-2016 ನೇ ಮಂಗಳವಾರ ವಿವೇಕಾನಂದ ಕಾನೂನು ಪದವಿ ಕಾಲೇಜಿನಲ್ಲಿ ಧಾರ್ಮಿಕ ಕ್ಷೇತ್ರಗಳಲ್ಲಿ ವಸ್ತ್ರ ಸಂಹಿತೆಯ ಅಗತ್ಯತೆ ಎನ್ನುವ ವಿಷಯದಲ್ಲಿ ಆಯೋಜಿಸಲಾದ ಭಾಷಣ ಸ್ಪರ್ಧೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿ ರಾಮನಾರಾಯಣ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

## ಪದವಿ ವಿಭಾಗ

**ದಿನಾಂಕ 01.01.2017**

ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಕಾಲೇಜು ವಾರ್ಷಿಕೋತ್ಸವದ ಪ್ರಯುಕ್ತ ವಿವಿಧ ಸ್ಪರ್ಧೆಗಳು ನಡೆದವು. ವಿಶೇಷವಾಗಿ ರಿದಮಿಕ್‌ಯೋಗ, ವೀಡಿಯೋ ಕ್ಲಿಪ್ಪಿಂಗ್, ವೇಷ-ಘೋಷ, ಪ್ರೋಪರ್ಟಿ ಡ್ಯಾನ್ಸ್, ವಾದ್ಯ ಸಂಗೀತ, ಈವೆಂಟ್ ಮ್ಯಾನೇಜ್‌ಮೆಂಟ್ ನಡೆಯಿತು.

**ಮಾಹಿತಿ ಕಾರ್ಯಾಗಾರ ದಿನಾಂಕ: 03.01.2017**

ವ್ಯಕ್ತಿತ್ವ ವಿಕಸನ ಕಾರ್ಯಕ್ರಮದಲ್ಲಿ ಬೆಂಗಳೂರಿನ ವಾಣಿಜ್ಯ ಅಕಾಡೆಮಿಯ ವಿನಯ್ ವಿ ಜಾದವ್ ಅವರು ಅಂತಿಮ ವಿಭಾಗದ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಜೊತೆಗೆ ವಿವೇಕಾನಂದ ಎಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕ ವ್ಯಾಸರಾಜ್ ಉಪಸ್ಥಿತರಿದ್ದರು. ವಾಣಿಜ್ಯ ಉಪನ್ಯಾಸಕಿ ಜಯಲಕ್ಷ್ಮಿ ಸ್ವಾಗತಿಸಿ, ವಂದಿಸಿದರು.

**ಸೆಮಿನರ್ ದಿನಾಂಕ : 03.01.2017**

ಉಡುಪಿ ಪೂರ್ಣಪ್ರಜ್ಞ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣವಾದ "GST A paradigm shift in Taxation Laws" ಎಂಬ ವಿಷಯದ ಕಾರ್ಯಾಗಾರದಲ್ಲಿ ವಾಣಿಜ್ಯ ಉಪನ್ಯಾಸಕ ರಂಜಿತ್ ಭಾಗವಹಿಸಿದ್ದರು.

**ವಸ್ತು ಪ್ರದರ್ಶನ ದಿನಾಂಕ : ಜನವರಿ 5 ರಿಂದ 10**

ಉಡುಪಿಯಲ್ಲಿ ನಡೆದ ಸಂಸ್ಕೃತ ಭಾರತಿ ಸಮ್ಮೇಳನದ ಪಾರಂಪರಾ ಪ್ರದರ್ಶಿನಿ ವಸ್ತು ಪ್ರದರ್ಶನ ಮೇಳದಲ್ಲಿ ಕಾಲೇಜಿನ ಪ್ರದ್ಯೋತ ಸಂಸ್ಕೃತ ಸಂಘದ ವಿದ್ಯಾರ್ಥಿಗಳು 5 ದಿನಗಳ ವಸ್ತುಪ್ರದರ್ಶನ ನಡೆಸಿಕೊಟ್ಟರು. ಇದರಲ್ಲಿ ದಿನನಿತ್ಯ ಬಳಕೆ ಮಾಡುವ ಸುಮಾರು 500ಕ್ಕಿಂತಲೂ ಹೆಚ್ಚು ವಸ್ತುಗಳ ಸಂಸ್ಕೃತ ಪರಿಚಯ, ರಾಷ್ಟ್ರೀಯ ವಿಚಾರಗಳನ್ನು ಬಿತ್ತುವ ಪುಸ್ತಕ ಮಾರಾಟ, ವಿಜ್ಞಾನ ಸಂಬಂಧಿ ವಸ್ತುಗಳ ಸಂಸ್ಕೃತ ಪರಿಚಯವನ್ನು ವೀಕ್ಷಕರುಗಳಿಗೆ ನೀಡಿದರು. ಒಟ್ಟು 60 ಸಂಸ್ಕೃತ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ದಿನಾಂಕ: 09.01.2017– 30-01-2017**

2016-17ನೇ ಸಾಲಿನ ಕಾಲೇಜು ವಾರ್ಷಿಕೋತ್ಸವದ ಪ್ರಯುಕ್ತ ಪ್ರತಾಪ ಕ್ರೀಡಾ ಸಂಘದ ವತಿಯಿಂದ ನಡೆದ ವಿವಿಧ ಗುಂಪು ಆಟಗಳಾದ ಕಬಡ್ಡಿ, ತ್ರೋಬಾಲ್, ಲಗೋರಿ, ಫುಟ್‌ಬಾಲ್, ಹಗ್ಗಜಗ್ಗಾಟ, ಚೆಸ್ ಕೇರಂ ಹಾಗೂ ವಿಶೇಷ ಅಟಗಳು ನಡೆದವು. ದೈಹಿಕ ಶಿಕ್ಷಕ ನಿರ್ದೇಶಕ ಅರವಿಂದ ಪ್ರಸಾದ್ ನಿರ್ವಹಿಸಿದರು.

**ಕ್ರೀಡಾ ವಿಭಾಗ ದಿನಾಂಕ: 12.01.2017**

ಆಳ್ವಾಸ್ ಕಾಲೇಜು ಮೂಡಬಿದಿರೆಯಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ಪುರುಷರ ಕಬಡ್ಡಿ ಸ್ಪರ್ಧೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ತೀರ್ಥೇಶ್, ಸಚಿನ್, ಯೋಗೀಶ್, ಸುರೇಶ್ ಕುಮಾರ್, ಸಚಿನ್, ಮಂಜುನಾಥ, ತೇಜಾಕ್ಷ, ಶಶಾಂಕ್, ಸುನಿಲ್ ಭಾಗವಹಿಸಿರುತ್ತಾರೆ.

**ಕ್ಯಾಶ್‌ಲೆಸ್ ಸೊಸೈಟಿ: ದಿನಾಂಕ 10.01.2017**

ವಿವೇಕಾನಂದ ಕಾನೂನು ಕಾಲೇಜು ನಗರ ಪುತ್ತೂರಿನಲ್ಲಿ ನಡೆದ ಕ್ಯಾಶ್‌ಲೆಸ್ ಸೊಸೈಟಿ ಎಂಬ ಇಂಗ್ಲೀಷ್ ಭಾಷಣ ಸ್ಪರ್ಧೆಯಲ್ಲಿ ದ್ವಿತೀಯ ಬಿ.ಕಾಂ. ಎ ವಿಭಾಗದ ಭವ್ಯಶ್ರೀ ಹಾಗೂ ನಗದು ರಹಿತ ಸಮಾಜದ ಅಗತ್ಯತೆ ಎಂಬ ವಿಷಯದ ಕನ್ನಡ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಿ.ಕಾಂ.ನ ಜಯರಾಜ್ ಭಾಗವಹಿಸಿರುತ್ತಾರೆ.

**ದಿನಾಂಕ 13.01.2017** ಮಂಗಳೂರು ರಾಮಕೃಷ್ಣ ಆಶ್ರಮ ಮಂಗಳಾದೇವಿ ಇಲ್ಲಿ ನಡೆದ ಭಗಿನಿ ನಿವೇದಿತಾರವರ 150ನೇ ವರ್ಷಾಚರಣೆಯ ಪ್ರಯುಕ್ತ ನಡೆದ ಶಕಿ ಮತ್ತು ಮಹಿಳಾ ಸಬಲೀಕರಣ ಎಂಬ ವಿಚಾರ ಸಂಕಿರಣದಲ್ಲಿ ಕಾಲೇಜಿನ 30ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕಿ ಶೈಲಜಾ ಮತ್ತು ಸುಕನ್ಯಾ ಭಾಗವಹಿಸಿದ್ದರು.

**ಉದ್ಯೋಗ ಮೇಳ ದಿನಾಂಕ: 03.01.2017**
ವಿವೇಕಾನಂದ ಕಾಲೇಜು ಪುತ್ತೂರಿನಲ್ಲಿ ನಡೆದ ವಿವೇಕ ಉದ್ಯೋಗ ಮೇಳ–2017 ಕಾಲೇಜಿನ ಅಂತಿಮ ವಿಭಾಗದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಇದರಲ್ಲಿ 6 ವಿದ್ಯಾರ್ಥಿಗಳು ಆಯ್ಕೆಯಾಗಿರುತ್ತಾರೆ.

**ಸ್ವ–ಉದ್ಯೋಗ ಕಾರ್ಯಾಗಾರ ದಿನಾಂಕ 13.01.2017**
ಅರ್ಥಶಾಸ್ತ್ರ ವಿಭಾಗ ಮತ್ತು ಸಂಶೋಧನ ವಿಭಾಗದ ವತಿಯಿಂದ ಪುತ್ತೂರು ವಿವೇಕಾನಂದ ಕಾನೂನು ಕಾಲೇಜಿನಲ್ಲಿ ನಡೆದ ಸ್ವ–ಉದ್ಯೋಗ ಎಂಬ ಒಂದು ದಿನದ ಕಾರ್ಯಾಗಾರದಲ್ಲಿ ಶ್ರೀರಾಮ ಪದವಿ ಕಾಲೇಜಿನ 30 ವಿದ್ಯಾರ್ಥಿಗಳು ಹಾಗೂ ಅರ್ಥಶಾಸ್ತ್ರ ಉಪನ್ಯಾಸಕ ಹರೀಶ್, ಸಚಿನ್, ಉಪನ್ಯಾಸಕ ರಂಜಿತ್ ಭಾಗವಹಿಸಿದ್ದರು.

**ಶ್ರಮದಾನ: ದಿನಾಂಕ 12.01.2017**
ವಿವೇಕ ಜಯಂತಿಯ ಪ್ರಯುಕ್ತ ಸುಧೆಕ್ಕಾರು ಗದ್ದೆಯಲ್ಲಿ ಗಿಡಗಳಿಗೆ ಗೊಬ್ಬರ ಹಾಕುವ ಒಂದು ದಿನದ ಶ್ರಮದಾನ ನಡೆಯಿತು. ಇದನ್ನು ಕಾಲೇಜಿನ ವಿದ್ಯಾರ್ಥಿಗಳು ನಡೆಸಿಕೊಟ್ಟರು.

**ಮೆಮೋರಿ ಟೆಸ್ಟ್ ಸ್ಪರ್ಧೆ: ದಿನಾಂಕ 11.01.2017**
ಪ್ರಣತಿ ಇಂಗ್ಲೀಷ್ ಸಂಘದ ವತಿಯಿಂದ ಮೆಮೋರಿ ಟೆಸ್ಟ್ ಸ್ಪರ್ಧೆ ನಡೆಯಿತು. ಇದರಲ್ಲಿ ಚಿತ್ರ ನೋಡಿ ಇಂಗ್ಲೀಷ್ ಶೀರ್ಷಿಕೆ ಬರೆಯಲು, ವಾಕ್ಯ ರಚನೆ, ಕಲ ಪದ ಸಂಯೋಜನೆ ನಡೆಯಿತು.

**ಚರ್ಚಾಸ್ಪರ್ಧೆ ದಿನಾಂಕ 13.01.2017 :**
ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ನಡೆದ ಕನ್ನಡ ಚರ್ಚಾಸ್ಪರ್ಧೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಶಿವಾನಂದ, ಭವ್ಯಶ್ರೀ ದ್ವಿತೀಯ ಬಿಕಾಂ ಭಾಗವಹಿಸಿದ್ದರು.

**ಅಂತರ್ ಕಾಲೇಜು ನೃತ್ಯ ಸ್ಪರ್ಧೆ:**
ಮಂಗಳೂರು ಪುರಭವನದಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಕುದ್ರೋಳಿ ನಾರಾಯಣಗುರು ಕಾಲೇಜು ಆಯೋಜಿಸಿದ ಅಂತರ ಕಾಲೇಜು ನೃತ್ಯ ಸ್ಪರ್ಧೆಯಾದ ಡ್ಯಾನ್ ವಾರ್ ಎಂಬ ನೃತ್ಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ದೀಕ್ಷಾ, ಪ್ರಿಯಾ, ಅಪೂರ್ವ, ಸೌಮ್ಯ, ಅನ್ವಿತಾ, ಕಾವ್ಯ, ಚಂದ್ರಿಕಾ, ವಿನುತಾ, ಸ್ವಾತಿ, ಧನ್ಯಶ್ರೀ, ಆಶಾ, ಪಲ್ಲವಿ ಭಾಗವಹಿಸಿದ್ದರು. ರಾಜ್ಯಶಾಸ್ತ್ರ ಉಪನ್ಯಾಸಕಿ ಜಯಲಕ್ಷ್ಮಿ ಸಹಕರಿಸಿದರು.

**ಫೋಟೋಗ್ರಾಫಿ ಸ್ಪರ್ಧೆ 16.01.2017**
ಬಂಟ್ವಾಳ ಶ್ರೀ ವೆಂಕಟರಮಣ ಸ್ವಾಮಿ ಕಾಲೇಜಿನ ವಿದ್ಯಾರ್ಥಿ ತೇಜಸ್ವಿನಿ, ಭವ್ಯಶ್ರೀ, ಅರ್ಚನಾ, ಕಾವ್ಯಶ್ರೀ, ಎಮ್., ಅಪೂರ್ವ, ಪ್ರತೀಕ್ಷಾ, ದೀಕ್ಷಾ, ತೀರ್ಥೇಶ್, ದೀಪಕ್ ನಾಯಕ್, ಸೂರಾಜ್ ಭಾಗವಹಿಸಿ ಕನ್ನಡ ಜಾನಪದ ಗೀತೆಯಲ್ಲಿ ಕಾವ್ಯಶ್ರೀ, ದ್ವಿತೀಯ ಸ್ಥಾನ ಹಾಗೂ ಸ್ಪೋರ್ಟ್ ಫೋಟೋಗ್ರಾಫಿ ಸ್ಪರ್ಧೆಯಲ್ಲಿ ದೀಪಕ್ ನಾಯಕ್ ತೃತೀಯ ಸ್ಥಾನ ಪಡೆದಿರುತ್ತಾರೆ.

**ಜನಪದ ಗೀತೆ ಸ್ಪರ್ಧೆ 18–01–2017:**
ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಹಂಪನಕಟ್ಟೆ ಇಲ್ಲಿ ನಡೆದ ವಿವಿಧ ಸ್ಪರ್ಧೆಗಳಾದ ಭಗವದ್ಗೀತೆಯಲ್ಲಿ ಸ್ವಾತಿಶ್ರೀ, ಶಾಸ್ತ್ರೀಯ ಸಂಗೀತದಲ್ಲಿ ಕಾವ್ಯಶ್ರೀ, ಜನಪದ ಗೀತೆಯಲ್ಲಿ ದೀಕ್ಷಿತಾ, ಸಮೂಹ ದೇಶ ಭಕ್ತಿಗೀತೆಯಲ್ಲಿ ತ್ರಿವೇಣಿ, ಹರ್ಷಿತಾ, ದೀಕ್ಷಿತಾ, ಅಖಿಲಾ, ಶ್ರುತಿ, ಶ್ರವಣ್, ಸಮೂಹ ಜನಪದ ಗೀತೆಯಲ್ಲಿ ಕಾವ್ಯಶ್ರೀ, ಕಾರ್ತಿಕ, ತೇಜಸ್ವಿನಿ, ಮಲ್ಲಿಕಾ, ಸ್ವಾತಿಶ್ರೀ, ಪೃಥ್ವಿರಾಜ್ ಭಾಗವಹಿಸಿದರು.

**ಸೆಮಿಸ್ಟರ್‌ನ ಫಲಿತಾಂಶ**
2016–17ನೇ ಸಾಲಿನ 1,3,5ನೇ ಸೆಮಿಸ್ಟರ್‌ನ ಫಲಿತಾಂಶ ಪ್ರಕಟವಾಗಿದ್ದು ಪ್ರಥಮ ಬಿ.ಎ.– 79.31%, ದ್ವಿತೀಯ ಬಿ.ಎ.–86%, ಅಂತಿಮ ಬಿ.ಎ.– 98%, ಅಂತಿಮ ಬಿ.ಕಾಂ. ಎ ವಿಭಾಗ– 72%, ಬಿ ವಿಭಾಗ – 81%, ದ್ವಿತೀಯ ಬಿಕಾಂ ಎ ವಿಭಾಗ –92%, ಬಿ ವಿಭಾಗ– 89%, ಪ್ರಥಮ ಬಿ.ಕಾಂ.– 74.41% ಪಡೆದಿರುತ್ತಾರೆ.

**ವಾರ್ಷಿಕ ಕ್ರೀಡಾಕೂಟ :31.01.2017**
ಪ್ರತಾಪ ಕ್ರೀಡಾ ಸಂಘದ ವತಿಯಿಂದ ನಡೆದ ವಾರ್ಷಿಕ ಕ್ರೀಡಾಕೂಟವನ್ನು ಕ್ರೀಡಾಜ್ಯೋತಿ ಬೆಳಗಿಸುವುದರ ಮೂಲಕ ಶ್ರೀ ಶೇಖರ ರೈ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಜೀವನದಲ್ಲಿ ಸಂಘಟಿತರಾಗಿ ಬದುಕನ್ನು ಕಟ್ಟುವ ಜವಾಬ್ದಾರಿಯನ್ನು ನಿರ್ವಹಿಸಬೇಕು. ಸಂಘಟಿತ ಬದುಕಿನಿಂದ ಜೀವನದಲ್ಲಿ ಯಶಸ್ಸು ಸಿಗುತ್ತದೆ ಎಂದರು. ದೈಹಿಕಶಿಕ್ಷಕ ನಿರ್ದೇಶಕರಾದ ಅರವಿಂದಪ್ರಸಾದ್ ಕ್ರೀಡಾಪಟುಗಳಿಗೆ ಕ್ರೀಡಾಪ್ರತಿಜ್ಞಾವಿಧಿ ಬೋಧಿಸಿದರು. ವೇದಿಕೆಯಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿ ಚಿತ್ತರಂಜನ್ ಹೊಸಕಟ್ಟ, ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್‌ನ ಕೋಶಾಧಿಕಾರಿ ಶಿವಗಿರಿ ಸತೀಶ್‌ಭಟ್, ಮತ್ತಿತರರು ಉಪಸ್ಥಿತರಿದ್ದರು.

**ಕವಿ ಗೋಷ್ಠಿ ದಿನಾಂಕ :14.01.2017**
ಬಂಟ್ವಾಳ ಶ್ರೀ ಸ್ವಾಮಿ ವೆಂಕಟರಮಣ ಕಾಲೇಜಿನ ಪದವಿ ವಿಭಾಗದ ಕನ್ನಡ ಉಪನ್ಯಾಸಕಿ ಶ್ರೀಮತಿ ನಾಗವೇಣಿ ಮಂಚಿ ಅವರು ಪ್ರಮಾಥಿ ಕನ್ನಡ ಸಂಘ ಹಾಗೂ ಪ್ರಜ್ಞಾನ ಸಾಹಿತ್ಯ ಸಂಘದ ಜಂಟಿ ಆಶ್ರಯದಲ್ಲಿ ನಡೆದ ವಿದ್ಯಾರ್ಥಿಗಳಲ್ಲಿ ಬರವಣಿಗೆಯ ಕೌಶಲ್ಯ ಎಂಬ ಒಂದು ದಿನದ ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡಿದರು. ಬಳಿಕ ಅವರು ಕವನ ವಾಚನ ಪ್ರಸ್ತಾವನೆ, ಕವನ ರಚನೆಯ ಹಂತ, ಕಥಾ ರಚನೆಯ ಮಾದರಿ ಹಾಗೂ ವಿದ್ಯಾರ್ಥಿಗಳು ತಾವೇ ರಚಿಸಿದ ಕವನವನ್ನು ಕವಿಗೋಷ್ಠಿಯ ಮೂಲಕ ಹೇಗೆ ಪ್ರಸ್ತುತ ಪಡಿಸುವುದು ಎಂದು ತಿಳಿಸಿದರು. ನಂತರ ವಿದ್ಯಾರ್ಥಿಗಳಿಂದ ಕವಿ ಗೋಷ್ಠಿ ನಡೆಯಿತು.

**ಶ್ರೀ ರಾಮಾನುಜಾಚಾರ್ಯ ನೆನಪು ಮತ್ತು ಸಂದೇಶ**
ಸಂಘದ ಹಿರಿಯ ಪ್ರಚಾರಕರಾದಂತಹ ಸು ರಾಮಣ್ಣ ಅವರು ಮಾತಾನಾಡಿ "ಶ್ರೀರಾಮಾನುಜರು ಕೇವಲ ದೀರ್ಘ ಕಾಲ ಬದುಕಿದಷ್ಟೇ ಅಲ್ಲದೇ ಚಿಂತನೆಗಳು ದೀರ್ಘ ಕಾಲ ಉಳಿಯುವಂತೆ ಬಾಳಿದವರು. ಆದ್ದರಿಂದ ಅವರು ಜೇಷ್ಠರೂ, ಶ್ರೇಷ್ಠರೂ ಎನಿಸಿಕೊಂಡರು. ಅವರ ಜೀವನದ ಪ್ರತ್ಯಕ್ಷ ಆಚರಣೆಗಳು ಎಲ್ಲರಿಗೂ ಪ್ರೇರಣೆಯಾಗಬಲ್ಲದು. ಈ ನಿಟ್ಟಿನಲ್ಲಿ ಅವರ ಜನನದ ಒಂದು ಸಾವಿರ ವರ್ಷಗಳ ಬಳಿಕವೂ ಅವರನ್ನು ನೆನಪಿಸಿಕೊಳ್ಳುತ್ತಿದ್ದೇವೆ " ಎಂದರು. ವೇದಿಕೆಯಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಡಾಪ್ರಭಾಕರ ಭಟ್, ಸಂಸ್ಥೆಯ ಸಂಚಾಲಕರು ವಸಂತ ಮಾಧವ, ಉಪಸ್ಥಿತರಿದ್ದರು.

## ನಿಮಗಿದು ತಿಳಿದಿರಲಿ

ಮುಂದೆ ಸಂಭವಿಸಲಿರುವ 300 ಭೂಕಂಪಗಳ ದಿನಾಂಕ ತಿಳಿಸಿದ್ದ ಜ್ಯೋತಿಷಿ




1932 ರಲ್ಲಿ ನಡೆದ ಘಟನೆಯಿದು. ಗ್ರೀನ್‌ವಿಚ್ ವೇದಶಾಲೆಯಲ್ಲಿ ದುಂಡು ಮೇಜಿನ ಸುತ್ತ ಕುಳಿತುಕೊಂಡು ಕೆಲವು ಖ್ಯಾತಿವೆತ್ತ ವಿಜ್ಞಾನಿಗಳು ಸೂರ್ಯನ ಚಿತ್ರಗಳನ್ನು ಗಮನಿಸುತ್ತ ಚರ್ಚಿಸುತ್ತಿದ್ದರು. ಎರಡು ವರ್ಷಕ್ಕೂ ಮುಂಚೆ ಸೂರ್ಯನ ಸುತ್ತ ಕೆಲವು ಕಪ್ಪು ಬಿಂದುಗಳು ಕಂಡು ಬಂದಿದ್ದು ಅದಕ್ಕೆ ಕಾರಣ ಹುಡುಕುವಲ್ಲಿ ನಿರತರಾಗಿದ್ದರು ಅವರು. ಅಷ್ಟರಲ್ಲಿ ಆ ವೇದಶಾಲೆಯ ಸಂದರ್ಶನಕ್ಕಾಗಿ ಬಂದ ಭಾರತೀಯ ಖಗೋಳಶಾಸ್ತ್ರಜ್ಞನೊಬ್ಬ ಆ ವಿಜ್ಞಾನಿಗಳು ಚರ್ಚಿಸುತ್ತಿರುವ ವಿಷಯವನ್ನು ತಿಳಿದು ಮುಗುಳು ನಕ್ಕ. ಇದನ್ನು ಗಮನಿಸಿದ ಅವರ ಜೊತೆಗಿದ್ದ ವೇದಶಾಲೆಯ ಸಂಚಾಲಕರು– 'ಇದರ ಬಗ್ಗೆ ನಿಮಗೇನಾದರೂ ಹೆಚ್ಚಿನ ಮಾಹಿತಿ ಗೊತ್ತೇ?' ಎಂದು ಕೇಳಿದರು. 'ಗೊತ್ತಿಲ್ಲದೇನು? ಈ ಕುರಿತು ನಮ್ಮ ಜ್ಯೋತಿಷ್ಯ ಗ್ರಂಥಗಳು ವಿಸ್ತರವಾಗಿ ತಿಳಿಸಿವೆ' ಎಂದರು ಆ ಖಗೋಳಶಾಸ್ತ್ರಜ್ಞರು.

ನಂತರ ಅಲ್ಲಿಯ ವಿಜ್ಞಾನಿಗಳ ಅಪೇಕ್ಷೆಯಂತೆ ಅವರು ಸೂರ್ಯನ ಸುತ್ತ ಆ ಕಪ್ಪು ಬಿಂದುಗಳು ತೋರಿಬರುವುದಕ್ಕೆ ಕಾರಣವನ್ನೂ, ಮುಂದೆ ಅವು ಮತ್ತೆ ಎಂದು ತೋರಿ ಬರಬಹುದು ಎಂಬ ಅಂಶವನ್ನೂ ಸುಮಾರು ಎರಡು ಘಂಟೆಗಳ ಕಾಲ ವಿವರಿಸಿದರು. ಇದನ್ನು ಕೇಳಿದ ವಿಜ್ಞಾನಿಗಳು ಆಶ್ಚರ್ಯದಿಂದ ಮೂಕರಾದರು. ಮರುದಿನ ಅಲ್ಲಿಯ ಪತ್ರಿಕೆಗಳಲ್ಲಿ ವಿಜ್ಞಾನಿಗಳ ಜೊತೆಗಿದ್ದ ಆ ಖಗೋಳಶಾಸ್ತ್ರಜ್ಞರ ಚಿತ್ರ ಹಾಗೂ ಪಾಂಡಿತ್ಯದ ಬಗ್ಗೆ ವಿಸ್ತರವಾಗಿ ಲೇಖನಗಳು ಪ್ರಕಟವಾದವು.

ಆ ಖಗೋಳಶಾಸ್ತ್ರಜ್ಞರ ಹೆಸರು ಪಂಡಿತ ಶ್ರೀ ಸೂರ್ಯನಾರಾಯಣ ವ್ಯಾಸ (ಕ್ರಿ.ಶ.1902–1976) ಎಂದು. ಉಜ್ಜಯಿನಿಯಲ್ಲಿ ಜನಿಸಿದ್ದ ಅವರು ಖಗೋಲ ವಿಜ್ಞಾನದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು. 1932ರಲ್ಲಿ ಗುಜರಾತಿನಲ್ಲಿ ದೊಡ್ಡ ಭೂಕಂಪ ಸಂಭವಿಸಿದಾಗ ಲೋಕಸಭೆಯಲ್ಲಿ ಸದಸ್ಯರೊಬ್ಬರು ಪ್ರಶ್ನಿಸಿದ್ದರು.– 'ಭೂಕಂಪದ ಪೂರ್ವಸೂಚನೆ ಪಡೆಯಲು ಸಾಧ್ಯವಿಲ್ಲವೇ ? ವಿಜ್ಞಾನದ ಬಲದಿಂದ ಅಂತಹದೊಂದು ಸಾಧನವನ್ನು ತಯಾರಿಸಲಾಗದೇ?' ಎಂದು. 'ಅಂತಹ ಯಾವುದೇ ಒಂದು ಸಾಧನವನ್ನೂ ಈ ವರೆಗೂ ಕಂಡುಹಿಡಿಯಲಾಗಲಿಲ್ಲ. ಸಿಸ್ಮೊಲಜಿ ಕೇಂದ್ರಗಳು ರಿಯಾಕ್ಟರ್ ಮಾಪಕದ ಮೂಲಕ ಭೂಕಂಪದ ತೀವ್ರತೆ ಎಷ್ಟಿತ್ತೆಂದು ಮಾತ್ರ ತಿಳಿಸಬಲ್ಲವು. ಆದರೆ ಅದು ಭೂಕಂಪ ನಡೆದ ಮೇಲೆ' ಎಂದು ಉತ್ತರ ನೀಡಲಾಯಿತು.

ಇದನ್ನು ತಿಳಿದ ಪಂ. ಸೂರ್ಯನಾರಾಯಣವ್ಯಾಸರು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಭೂಕಂಪದ ಬಗ್ಗೆ ವಿಸ್ತೃತವಾದ ಲೇಖನವೊಂದನ್ನು ಬರೆದು ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ 300 ಭೂಕಂಪಗಳನ್ನು ದಿನಾಂಕಸಹಿತ ವಿವರಿಸಿದ್ದರು. ಮುಂದೇ ಅದೇ ದಿನಗಳಲ್ಲಿ ಭೂಕಂಪಗಳು ಸಂಭವಿಸಿದವು.



ಆರೋಗ್ಯ ಜಾಗೃತಿಗಾಗಿ ಆರೋಗ್ಯ ಇಲಾಖೆಯ ವತಿಯಿಂದ
ಪ್ರೌಢಶಾಲಾ ಆವರಣದಲ್ಲಿ ನಡೆದ ಬೀದಿ ನಾಟಕ



ಪುತ್ತೂರಿನ ರೇಡಿಯೋ ಪಾಂಚಜನ್ಯದ ವಿದ್ಯಾರ್ಥಿ ವಾಹಿನಿಗೆ ಕಾರ್ಯಕ್ರಮ
ನೀಡಿದ ಪ್ರೌಢಶಾಲಾ ವಿಭಾಗದ ತಂಡ



ವಿದ್ಯಾಕೇಂದ್ರದ ವಸುಧಾರ ಗೋ-ಶಾಲೆಯ ಗೋವು-ಮೇವು-ನಾವು
ಯೋಜನೆಯಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳು



ಕಲಿಕೆಯಲ್ಲಿ ಅವಕಾಶಗಳು ಎಂಬ ಕಾರ್ಯಾಗಾರವನ್ನು ಸುತ್ತಮುತ್ತಲ
ಶಾಲೆಗಳಲ್ಲಿ ಪ.ಪೂ ವಿಭಾಗದ ಉಪನ್ಯಾಸಕರು ನಡೆಸಿದರು.



ಪ.ಪೂ ವಿಭಾಗದಲ್ಲಿ ವಿವೇಕಾನಂದ ಕಾನೂನು ವಿದ್ಯಾಲಯದ
ವತಿಯಿಂದ ನಡೆದ ಕಾನೂನು ಮಾಹಿತಿ ಕಾರ್ಯಾಗಾರ



ಮಂಗಲಾಕ್ಷತೆ ಅಭಿಯಾನ ಪ್ರೌಢಶಾಲಾ ವಿಭಾಗದಲ್ಲಿ



ಪ.ಪೂ ವಿಭಾಗದ ಉಪನ್ಯಾಸಕರಿಗೆ ವಿ.ವಿ.ಸಂ ಪುತ್ತೂರು ಆಯೋಜಿಸಿದ
ವಿಷಯಾಧಾರಿತ ಕಾರ್ಯಾಗಾರ



ಪದವಿ ವಿಭಾಗದ ವಾರ್ಷಿಕ ಕ್ರೀಡಾಕೂಟ



ಪದವಿ ವಿಭಾಗದ ಸಾಂಸ್ಕೃತಿಕ ಸ್ಪರ್ಧೆಗಳ ಅಂಗವಾಗಿ ನಡೆದ
ವಿಶೇಷ ವಾದ್ಯ ಸಂಗೀತ ಸ್ಪರ್ಧೆ



ಪದವಿ ವಿಭಾಗದಲ್ಲಿ ನಡೆದ ಮಾನಸಿಕ ಏಕಾಗ್ರತೆ ಹೆಚ್ಚಿಸುವ
ಯೋಗ, ಧ್ಯಾನ, ಪ್ರಾಣಾಯಾಮದ ವಿಶೇಷ ತರಗತಿ.



ಪದವಿ ವಿಭಾಗದ ರಾಷ್ಟ್ರೀಯ ಯುವ
ದಿನಾಚರಣೆಯಲ್ಲಿ ಶ್ರೀ ತನುಜ್ ಶೆಣೈ



ಪದವಿ ವಿಭಾಗದಲ್ಲಿ ಸ್ವಚ್ಛ ಭಾರತಕ್ಕಾಗಿ ಸ್ವಚ್ಛ ಗ್ರಾಮ ಯೋಜನೆಯ 5ನೇ ಹಂತದ ಸ್ವಚ್ಛತಾ ಕಾರ್ಯಕ್ರಮ





ಪ್ರೌಢಶಾಲಾ ವಿಭಾಗದ ಸಾಮೂಹಿಕ ಹುಟ್ಟು ಹಬ್ಬ ಮತ್ತು ಭಜನಾ ಕಾರ್ಯಕ್ರಮದಲ್ಲಿ
ಶ್ರೀ ನವೀನ ಕೃಷ್ಣ (ಪುತ್ತೂರು ವಿವೇಕಾನಂದ ಇಂಜಿನಿಯರ್ ಕಾಲೇಜಿನಉಪನ್ಯಾಸಕರು)



ಬಾರ್ಕೂರು, ಉಡುಪಿ,ಮಲ್ಪೆ, ಹಾಗೂ ಮತ್ತಿತ್ತರ ಐತಿಹಾಸಿಕ ಸ್ಥಳಗಳಿಗೆ ಏರ್ಪಡಿಸಲಾದ ಪ.ಪೂ ವಿಭಾಗದ
ಏಕದಿನದ ಕಿರು ಪ್ರವಾಸ .



ಪದವಿ, ಪ.ಪೂ ವಿಭಾಗದ ಸಂಸ್ಕೃತ ಸಂಘ ಉಡುಪಿಯಲ್ಲಿ
ಆಯೋಜಿಸಿದ ವಸ್ತು ಪ್ರದರ್ಶಿನಿ



ಪದವಿ ಸಾಹಿತ್ಯ ಸಂಘ ಆಯೋಜಿಸಿದ ಬರವಣಿಗೆಯ
ಕೌಶಲ್ಯದ ಕಾರ್ಯಾಗಾರದಲ್ಲಿ ಶ್ರೀಮತಿ ನಾಗವೇಣಿ ಮಂಚಿ



ನವೀನ್ ಬೆಂಗಳೂರು ನಡೆಸಿಕೊಟ್ಟ ಸಂದರ್ಶನ ಎದುರಿಸುವುದು
ಹೇಗೆ ಎಂಬ ಕಾರ್ಯಕ್ರಮದಲ್ಲಿ ಅಂತಿಮ ಪದವಿ ವಿದ್ಯಾರ್ಥಿಗಳು



ಪದವಿ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿದ ಶ್ರೀರಾಮಚಂದ್ರ
ಪ.ಪೂ .ಕಾಲೇಜಿನ ಪ್ರಾಂಶುಪಾಲರು ಶ್ರೀ ಶೇಖರ್ ರೈ



8.1.2017ರಂದು ನಡೆದ 8ನೇ ತರಗತಿಯ ಶೈಕ್ಷಣಿಕ ಪ್ರವಾಸ – ಉಡುಪಿಯ ಶ್ರೀಕೃಷ್ಣ ಮಠ, ಕಟೀಲು ಶ್ರೀ ದುರ್ಗಾಪರಮೇಶ್ವರಿ
ದೇವಾಲಯ, ಪಿಲಿಕುಳ ನಿಸರ್ಗಧಾಮ, ಕೆ.ಎಂ.ಎಫ್, ಪಣಂಬೂರು ಕಡಲ ಕಿನಾರೆ



ಪ್ರೌಢಶಾಲೆಯಲ್ಲಿ ಸುತ್ತಮುತ್ತಲಿನ ಶಾಲೆಯ ವಿದ್ಯಾರ್ಥಿಗಳಿಗೆ
ನಡೆದ ಅಂತರ್ಜಾಲ ಪ್ರಪಂಚ ಕಾರ್ಯಕ್ರಮ




ಮೈಟ್ ಮಂಗಳೂರಿನಲ್ಲಿ ನಡೆದ ವೃತಿಪರ ಕೋರ್ಸ್‌ಗಳ ಮಾಹಿತಿ ಕಾರ್ಯಾಗಾರದಲ್ಲಿ
ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು



ಬಿ.ಸಿ.ರೋಡ್ ತಾಲೂಕು ಕಚೇರಿಯ ಮುಂಭಾಗದ
ಗಣರಾಜ್ಯೋತ್ಸವದಲ್ಲಿ ಪ್ರೌಢಶಾಲೆಯ ಘೋಷ್ ತಂಡ



ಉಡುಪಿಯ ಅಖಿಲ ಭಾರತ ಸಂಸ್ಕೃತ ಅಧಿವೇಶನದಲ್ಲಿ
ಪರಂಪರಾ ವಸ್ತು ಪ್ರದರ್ಶಿನಿಯನ್ನು ಆಯೋಜಿಸಿದ ತಂಡ



ರೇಡಿಯೋ ಪಾಂಚಜನ್ಯಕ್ಕೆ ಧ್ವನಿ ನೀಡಿದ
ಪದವಿ ವಿದ್ಯಾರ್ಥಿವೃಂದ

**Postal Regn No. PTR/135/2016-18** **Licensed to Post without pre-payment** **License No: SK/WPP/PTR/177/2016-18**

ಸರಯೂ

**Vol. : 3** **Issue : 9** **Rs. 10/-**

**KARKAN/2014/62363**
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Ph.: 08255-275273 / 275183 / 275073 / 275693 / 279673 / 200085 / 279479
Website : www.srvk.org E-mail : info@srvk.org

BOOK POST

**ಸವಿಧೇ,**

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 08255-275 273. Printed at Anagha Digital Square, Kaikamba, B.C. Road - 574 219, Bantwal Tq., Dakshina Kannada, Karnataka. Registration No. : KARKAN/2014/62363